**<u>ದಿಃ-14-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿಸವಾಲು ಃ ಎದುರುದಾರರ ಪರ ಶ್ರೀ. ವಿ.ಆರ್.ಬಿ ವಕೀಲರಿಂದ ಃ</u>**

1. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದು ಅದರಲ್ಲಿ ತೇರ್ಗಡೆ ಹೊಂದಿರುತ್ತೇನೆ. ನನಗೆ ಆಂಗ್ಲ ಭಾಷೆಯನ್ನು ಓದಲು ಅಷ್ಟೊಂದು ಚೆನ್ನಾಗಿ ಬರುವುದಿಲ್ಲ. ನಾನು ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಬರೆದಿರುವ ವಿಚಾರಗಳು ನನಗೆ ಸರಿಯಾಗಿ ತಿಳಿದಿರುತ್ತದೆ.

2. ಪ್ರಸ್ತುತ ನಾನು ಮೂಡಲಪಾಳ್ಯ, ನಾಗರಭಾವಿ ರಸ್ತೆ, ಬೆಂಗಳೂರು - 72 ರಲ್ಲಿ ವಾಸಿಸುತ್ತಿದ್ದೇನೆ. ಅದು ನನ್ನ ಸ್ವಂತ ಮನೆಯಾಗಿರುತ್ತದೆ. ಆ ಮನೆಯಲ್ಲಿ ನಾನು 1995 ರಿಂದ ವಾಸಿಸುತ್ತಿದ್ದೇನೆ. ನನ್ನ ಪ್ರಸ್ತುತ ವಯಸ್ಸು 55 ಆಗಿರುತ್ತದೆ. ನನ್ನ ಆರೋಗ್ಯ ಚೆನ್ನಾಗಿದ್ದು ನನಗೆ ಸಕ್ಕರೆ ಖಾಯಿಲೆ ಇರುತ್ತದೆ. ನನಗೆ ಯಾವುದೇ ಪ್ರಾಣಾಂತಿಕ ಖಾಯಿಲೆ ಇರುವುದಿಲ್ಲ.

3. ನಾನು ಎಲೆಕ್ಟ್ರಿಕಲ್ ಕಾಂಟ್ರ್ಯಾಕ್ಟರ್ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ನಾನು ಎಲೆಕ್ಟ್ರಿಕಲ್ ಕಾಂಟ್ರ್ಯಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಬಗ್ಗೆ ಲೈಸೆನ್ಸ್ ಇರುತ್ತದೆ. ನನ್ನ ವಿಳಾಸದ ಬಗ್ಗೆ ಮತ್ತು ಲೈಸೆಂಸಿನ ಬಗ್ಗಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ.

4. ನನಗೆ ಕಳೆದ 15 ವರ್ಷಗಳಿಂದ ಹೇಮಂತ್ ಕುಮಾರ್ ರವರ ಪರಿಚಯ ಇರುತ್ತದೆ. ನಾನು ಮತ್ತು ಅವರು ಸಮಾನ ವಯಸ್ಕರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಈ ಪ್ರಕರಣವನ್ನು ಹೇಮಂತ್ ಕುಮಾರ್ ರವರು ಯಾವುದನ್ನು ಕೋರಿ ಸಲ್ಲಿಸಿದ್ದಾರೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಆ ಬಗ್ಗೆ ನಾನು ಹೇಳಬಹುದು. ಹೇಮಂತ್ ಕುಮಾರ್ ರವರ ತಂದೆಯವರು ಅವರ ಹೆಸರಿನಲ್ಲಿ ಮರಣ ಶಾಸನವನ್ನು ಬರೆದಿದ್ದು ಅದಕ್ಕೆ ನಾನು ಸಾಕ್ಷಿದಾರನಾಗಿದ್ದರಿಂದ ಆ ಬಗ್ಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ.

5. ಚಿಕ್ಕಣ್ಣನವರು 2004 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣಕ್ಕೆ ನಾನು ಹೋಗಿರುತ್ತೇನೆ. ಆ ಸಮಯದಲ್ಲಿ ಮರಣ ಶಾಸನ ಬರೆದ ಬಗ್ಗೆ ನಾನು ಯಾರಲ್ಲೂ ಹೇಳಿರುವುದಿಲ್ಲ. ಈ ದಾವೆಯನ್ನು 2015 ರಲ್ಲಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿದೆ. ಈ 11 ವರ್ಷಗಳ ಕಾಲ ಮರಣ ಶಾಸನ ಇದ್ದ ಬಗ್ಗೆ ಹೇಳಲು ಯಾವುದೇ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅಲ್ಲಿ ಈ ವರೆಗೂ ಯಾವುದೇ ಗಲಾಟೆಗಳು ಆಗಿರಲಿಲ್ಲ ಅದಕ್ಕೆ ನಾನು ಮರಣ ಶಾಸನ ಇದ್ದ ಬಗ್ಗೆ ತಿಳಿಸಿರಲಿಲ್ಲ. ಈ ಮರಣ ಶಾಸನದ ಬಗ್ಗೆ ಮಾಸ್ತಿ ಗೌಡರು ಸ್ವತಃ ಹೇಳಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ ಆದ್ದರಿಂದ ನಾನು ಹೇಳಿರಲಿಲ್ಲ.

6. ಮಾಸ್ತಿ ಗೌಡರು ಎಲ್ಲೆಲ್ಲಿ ಲೇಔಟ್ ಗಳನ್ನು ಮಾಡಿದ್ದಾರೆ ಎಂಬುದನ್ನು ನಾನು ನೋಡಿರುತ್ತೇನೆ. ದಾಸರಹಳ್ಳಿಯಲ್ಲಿ ಒಂದು ಮತ್ತು ತುಮಕೂರಿನಲ್ಲಿ ಒಂದು ಲೇಔಟನ್ನು ಮಾಡಿದ್ದೇನೆ ಎಂದು ಅವರು ನನ್ನಲ್ಲಿ ಹೇಳಿರುತ್ತಾರೆ. ಈ ಎರಡೂ ಲೇಔಟುಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾಸರಹಳ್ಳಿಯಲ್ಲಿ ಮಾಡಿದ ಲೇಔಟನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಲೇಔಟಿನ ಹೆಸರು ಮತ್ತು ಸರ್ವೇ ನಂಬರನ್ನು ಹೇಳಲು ನನಗೆ ನೆನಪಾಗುತ್ತಿಲ್ಲ. ಈ ಎರಡೂ ಲೇಔಟುಗಳನ್ನು ಯಾವ ವರ್ಷದಲ್ಲಿ ಮಾಡಲಾಗಿದೆ ಎಂದು ನನಗೆ ನೆನಪಿಲ್ಲ.

**ಪ್ರಶ್ನೆ 1 ಃ** ಈ ಮೇಲೆ ತಿಳಿಸಿದ ಎರಡು ಲೇಔಟ್ ಮಾಡಲು ನೀವು ಇಲೆಟ್ರಿಕಲ್ ಕಾಂಟ್ರ್ಯಾಕ್ಟರ್ ಆಗಿ ಕೆಲಸ ಮಾಡಿದ್ದಿರೀಯೇ?

**ಉತ್ತರ ಃ** ಈ ಪ್ರಶ್ನೆ ನನಗೆ ಅರ್ಥವಾಗಿರುವುದಿಲ್ಲ ಕಾರಣ ಈ ಲೇಔಟ್ ನಲ್ಲಿ ಅಭಿವೃದ್ಧಿ ಮಾಡಲು ಇಲೆಟ್ರಿಕಲ್ ಕೆಲಸ ಮಾಡಿದ ಬಗ್ಗೆ ಕೇಳುತ್ತಿದ್ದಾರೆಯೇ ಅಥವಾ ಅದರಲ್ಲಿ ಕಟ್ಟಿರುವಂತಹ ಕಟ್ಟಡಗಳು, ಕಾರ್ಖಾನೆಗಳು ಮತ್ತು ಮನೆಗಳಿಗೆ ಇಲೆಟ್ರಿಕಲ್ ಕೆಲಸ ಮಾಡಿದ ಬಗ್ಗೆ ಕೇಳುತ್ತಿದ್ದಾರೆಯೇ ಎಂದು ನನಗೆ ಗೊತ್ತಾಗುತ್ತಿಲ್ಲ.

**ಪ್ರಶ್ನೆ 2 ಃ** ಈ ಮೇಲೆ ತಿಳಿಸಿದ ಎರಡು ಲೇಔಟ್ ಅಭಿವೃದ್ಧಿ ಮಾಡಲು ನೀವು ಇಲೆಟ್ರಿಕಲ್ ಕಾಂಟ್ರ್ಯಾಕ್ಟರ್ ಆಗಿ ಕೆಲಸ ಮಾಡಿದ್ದಿರೀಯೇ?

ಉತ್ತರ ಃ ಅಭಿವೃದ್ಧಿ ಮಾಡಲು ನಾನು ಇಲೆಟ್ರಿಕಲ್ ಕೆಲಸ ಮಾಡಿರುತ್ತೀನಿ ಆದರೆ ನನಗೆ ಈಗ ಜ್ಞಾಪಕ ಇಲ್ಲ.

7. ನನಗೂ ಚಿಕ್ಕಣ್ಣರವರಿಗೂ ಸುಮಾರು 18 ವರ್ಷಗಳ ವಯಸ್ಸಿನ ಅಂತರ ಇದೆ. ನನಗೆ ಆವಾಗ 42 ವರ್ಷ ವಯಸ್ಸಾಗಿರಬಹುದು. ಸಾಕ್ಷಿ ಮತ್ತೊಮ್ಮೆ 35 ಇರಬಹುದು ಎಂದು ನುಡಿಯುತ್ತಾರೆ. ಚಿಕ್ಕಣ್ಣನವರ ಅಂತ್ಯ ಸಂಸ್ಕಾರವನ್ನು ಅವರ ಕಟ್ಟಡದ ಹಿಂಬದಿಯಲ್ಲಿ ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು ಆ ಜಾಗಕ್ಕೆ ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್ ಎಂದು ಕರೆಯುತ್ತಾರೆ ಮತ್ತು ದಾಸರಹಳ್ಳಿ ಇಂಡಸ್ಟ್ರಿಯಲ್ ಟೌನ್ ಎಂದು ಮತ್ತು ದಾಸರಹಳ್ಳಿ ಇಂಡಸ್ಟ್ರಿಯಲ್ ನಗರ ಎಂದೂ ಕರೆಯುತ್ತಾರೆ.

8. ಚಿಕ್ಕಣ್ಣನವರಿಗೆ 3 ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳು ಇದ್ದಾರೆ. ಅವರ ಹೆಂಡತಿಯ ಹೆಸರು ಗಂಗಮ್ಮ. ಅವರ ಮಕ್ಕಳ ಹೆಸರು ಮಾಲಾ, ತ್ರಿವೇಣಿ, ವಿಜಯಮ್ಮ, ವಿಶ್ವನಾಥ್ ಮತ್ತು ಹೇಮಂತ್ ಆಗಿರುತ್ತದೆ. ನಾನು ಅವರ ಮಕ್ಕಳ ಮದುವೆಯ ಕಾರ್ಯಕ್ರಮಕ್ಕೆ ಭಾಗಿಯಾಗಿರುವುದಿಲ್ಲ. ಸಾಕ್ಷಿ ಮುಂದುವರಿದು ಅವರು ಎಲ್ಲಾ ಕಾರ್ಯಕ್ರಮಕ್ಕೂ ನನ್ನನ್ನು ಕರೆದಿದ್ದು ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

9. ಅರ್ಜಿದಾರರಾದ ಹೇಮಂತ್ ರವರಿಗೆ ಮದುವೆಯಾದ ವಿಚಾರ ಗೊತ್ತಿರುತ್ತದೆ. ಮಾಸ್ತಿ ಗೌಡರು ತಮ್ಮ ಎಲ್ಲಾ ಮಕ್ಕಳಿಗೂ ಮದುವೆಯಾಗಿರುತ್ತದೆ ಎಂದು ಹೇಳಿರುತ್ತಾರೆ.

10. ಈ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿರುವುದಿಲ್ಲ.

**ಪ್ರಶ್ನೆ 3 ಃ** ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ನಿಮ್ಮನ್ನು ಯಾರು ಕರೆದುಕೊಂಡು ಬಂದರು?

**ಉತ್ತರ ಃ** ಗಲಾಟೆಯಾದ ಬಗ್ಗೆ ನಾನು ಇಂಡಸ್ಟ್ರಿಯಲ್ ಟೌನ್ ನಲ್ಲಿ ಕೆಲಸ ಮಾಡಲು ಹೋದಾಗ ಅಲ್ಲಿಯ ಜನರು ಮಾಸ್ತಿ ಗೌಡರ ಹೆಣ್ಣು ಮಕ್ಕಳು ಭಾಗವನ್ನು ಕೋರಿ ಗಲಾಟೆ ಮಾಡಿದ ವಿಚಾರ ನನಗೆ ಗೊತ್ತಾಗಿದ್ದು ಆಮೇಲೆ ನಾನು ಚಿಕ್ಕರಾಮಯ್ಯನವರಿಗೆ ಫೋನ್ ಮುಖಾಂತರ ಈ ವಿಚಾರವನ್ನು ತಿಳಿಸಿರುತ್ತೇನೆ. ಆನಂತರ ಹೇಮಂತ್ ರವರು ನನಗೆ ದೂರವಾಣಿ ಕರೆ ಮಾಡಿ ನನ್ನನ್ನು ಕರೆದಿದ್ದು ನಾನು ಮತ್ತು ಹೇಮಂತ್ ರವರು ಚಿಕ್ಕರಾಮಯ್ಯನವರ ಊರು ಸಣಬ, ಕುಣಿಗಲ್ ತಾಲೂಕಿಗೆ ಚಿಕ್ಕರಾಮಯ್ಯನವರ ಮನೆಗೆ ಹೋಗಿರುತ್ತೇವೆ. ಆ ಸಂದರ್ಭ ಮರಣ ಶಾಸನವನ್ನು ಹೇಮಂತ್ ರವರ ಕೈಯಲ್ಲಿ ನೀಡಿರುತ್ತಾರೆ. ಇದು 2014 ರಲ್ಲಿ ಆಗಿದ್ದು ನನಗೆ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ.

11. ನಾನು ಆ ಜಾಗಕ್ಕೆ ಹೋದಾಗ ಜಗಳ ಮಾಡುತ್ತಿರಲಿಲ್ಲ ಆದರೆ ಜಗಳ ಮಾಡುವುದು ಟಿವಿಯಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಟಿವಿಯಲ್ಲಿ ಬಂದಿರುವುದನ್ನು ನೋಡಿರುತ್ತೇನೆ. ಜಗಳವಾಗಿರುವಂತದ್ದು ದಾಸರಹಳ್ಳಿ ಟೌನ್ ಮತ್ತು ಅದನ್ನು ರಾಜಾಜಿನಗರ ಇಂಡಸ್ಟ್ರಿಯಲ್ಲಿ ಟೌನ್ ಎಂಬ ಜಾಗದಲ್ಲಿ ನಡೆದಿರುತ್ತದೆ. ಈ ಜಗಳವು ಅವರ ಕಾರ್ಖಾನೆಯ ಕಟ್ಟಡದ ಮುಂದೆಯೇ ಆಗಿರುತ್ತದೆ.

12. ಸಣಬಕ್ಕೆ ಹೋಗುವ ಮೊದಲು ನನ್ನನ್ನು ಅರ್ಜಿದಾರರು ನ್ಯಾಯಾಲಯಕ್ಕೆ ಬರಲು ಕರೆದಿರುವುದಿಲ್ಲ. ಸಾಕ್ಷಿದಾರರು ಸಣಬಕ್ಕೆ ಹೋಗಿ ಬಂದು ಅವರಿಗೆ ಕೊಟ್ಟ ದಾಖಲೆಯನ್ನು ನೋಡಿದ ನಂತರ ನನ್ನನ್ನು ನ್ಯಾಯಾಲಯಕ್ಕೆ ಬರಲು ಕೇಳಿಕೊಂಡಿರುತ್ತಾರೆ. ಮೇಲೆ ಹೇಳಿದ ಎಲ್ಲಾ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರಲೂಬಹುದು ಬರೆದಿಲ್ಲದೇ ಇರಬಹುದು. ಮುಖ್ಯ ವಿಚಾರಣಾ ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿ ಬರೆದಿದ್ದು ಅದನ್ನು ನನಗೆ ಓದಲು ಬರುವುದಿಲ್ಲ ಎಂದು ನಾನು ಈಗಾಗಲೇ ಹೇಳಿರುತ್ತೇನೆ ಆದರೆ ನನಗೆ ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿರುತ್ತದೆ. ಆದರೆ ನಾನು ಮೇಲಿನ ವಿಚಾರವನ್ನು ವಕೀಲರಲ್ಲಿ ಹೇಳಿರುತ್ತೇನೆ. ಈ ಎಲ್ಲಾ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿಲ್ಲ ಮತ್ತು ನಾನು

ಪ್ರಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಚಿಕ್ಕಣ್ಣನವರು ತನ್ನ ಮಕ್ಕಳಿಗೆ ಯಾವ ಯಾವ ದಾಖಲೆಯನ್ನು ಮಾಡಿದ್ದೇನೆ ಎಂದು ಹೇಳಿದ್ದಾರೆ ಆದರೆ ಅದು ಯಾವ ದಾಖಲೆಯೆಂದು ನನಗೆ ನೆನಪಾಗುತ್ತಿಲ್ಲ. ಅದು ಯಾವ ದಾಖಲೆಗಳೆಂದು ನಾನು ವಕೀಲರಿಗೆ ಹೇಳಿರುತ್ತೇನೆ ಆದರೆ ಅವರು ಬರೆದಿದ್ದಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ.

14. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತುಮಕೂರಿಗೆ ಹೋಗಿದ್ದೇನೆ ಎಂದು ನಮೂದಿಸಿದ್ದು ಆ ರೀತಿ ನಾನು ತುಮಕೂರಿಗೆ ಎರಡು ಬಾರಿ ಹೋಗಿರುತ್ತೇನೆ. ನಾನು, ಮಾಸ್ತಿ ಗೌಡ ಮತ್ತು ಚಿಕ್ಕರಾಮಯ್ಯನವರು ಮೂರೂ ಜನ ಸೇರಿ ತುಮಕೂರಿಗೆ ಹೋಗಿರುತ್ತೇವೆ.

15. ಮಾಸ್ತಿ ಗೌಡರು ಎಷ್ಟು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅವರು ನನ್ನಲ್ಲಿ ಹೇಳಿದ್ದಾರೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ.

16. ಸಾಮಾನ್ಯವಾಗಿ ಮಾಸ್ತಿ ಗೌಡರು ತಮ್ಮ ಸಹಿಯನ್ನು ಎಲ್ಲದಕ್ಕೂ ಆಂಗ್ಲ ಭಾಷೆಯಲ್ಲಿ ಹಾಕುತ್ತಿದ್ದರು. ಸಾಕ್ಷಿ ಮುಂದುವರಿದು ಕೆಲವು ದಾಖಲೆಗಳಿಗೆ ಕನ್ನಡದಲ್ಲೂ ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

17. ಚಿಕ್ಕರಾಮಯ್ಯನವರು ನಾವು ತುಮಕೂರಿಗೆ ಹೋಗಬೇಕಾಗಿದ್ದ ದಿನ ಸಣಬದಿಂದ ಬೆಂಗಳೂರಿಗೆ ಬಂದಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿದ್ದು. ಸಾಕ್ಷಿ ಮುಂದುವರಿದು ಅವರು ಸಣಬದಿಂದ ಬಂದಿಲ್ಲ ಬದಲಾಗಿ ಅವರು ಹೆಗ್ಗನಹಳ್ಳಿಯಿಂದ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ನಾವು ತುಮಕೂರಿಗೆ ಬಸ್ಸಿನಲ್ಲಿ ಹೋಗಿರುತ್ತೇವೆ. ಚಿಕ್ಕಣ್ಣನವರಿಗೆ ತುಮಕೂರಿಗೆ ಹೋಗುವ ಸಮಯದಲ್ಲಿ ಸ್ವಂತ ಕಾರು ಇತ್ತು ಎಂದರೆ ಇರಬಹುದು. ಆ ಕಾಲದಲ್ಲಿ ಅವರಿಗೆ ಕ್ವಾಲಿಸ್ ಕಾರು ಮತ್ತು ಮಾರುತಿ ಒಮ್ನಿ ಕಾರು ಇತ್ತು ಎಂದರೆ ಇರಬಹುದು. ಚಿಕ್ಕಣ್ಣನವರು ಯಾವಾಗಲೂ ಅವರ ಸ್ವಂತ ಕಾರಿನಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ಕುಟುಂಬ ಕಾರಿನಲ್ಲಿ ಓಡಾಡುತ್ತಿದ್ದು ಚಿಕ್ಕಣ್ಣನವರನ್ನು ಸ್ಕೂಟರಿನಲ್ಲಿ ಅವರನ್ನು ಒಬ್ಬರು ಕರೆದುಕೊಂಡು ಹೋಗಿ ಕರೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ.

18. ನಾವು ತುಮಕೂರಿಗೆ ಪ್ರಥಮವಾಗಿ ಅಲ್ಲಿಯ ನೊಂದಣಿ ಕಚೇರಿ ಮತ್ತು ತಹಶೀಲ್ದಾರರ ಕಚೇರಿಗೆ ಹೋಗಿರುತ್ತೇವೆ. ನೊಂದಣಿ ಕಚೇರಿಯ ಬಳಿ ದಸ್ತಾವೇಜು ಬರಹಗಾರರು ಇದ್ದು ಅವರ ಬಳಿ ಹೋಗಿರುತ್ತೇವೆ. ಅವರ ಹೆಸರು ಮತ್ತು ವಿಳಾಸ ನನಗೆ ಈಗ ನೆನಪಿಲ್ಲ. ಅವರನ್ನು ನಾನು ನೋಡಿರುತ್ತೇನೆ. ನಾವು ಹೋದ ತಕ್ಷಣ

ಅಲ್ಲಿ ದಾಖಲೆ ಬರೆದು ಇಟ್ಟಿದ್ದರು. ಚಿಕ್ಕಣ್ಣನವರು ನಾವು ಹೋಗುವ ಮೊದಲಿನ ದಿನಗಳಲ್ಲೇ ದಸ್ತಾವೇಜು ಬರಹಗಾರರನ್ನು ಭೇಟಿಯಾಗಿ ಏನು ಬರೆಯಬೇಕೆಂದು ಅವರಿಗೆ ಮಾಹಿತಿಯನ್ನು ನೀಡಿರಬಹುದು. ಆ ಬಾರಿ ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಬರೆದಿರುವುದಿಲ್ಲ. ಅದನ್ನು ಕೈ ಬರವಣಿಗೆಯಲ್ಲಿ ಬರೆದಿರುತ್ತಾರೆ ಬೆರಳಚ್ಚು ಮಾಡಿರುವುದಿಲ್ಲ. ದಸ್ತಾವೇಜು ಬರಹಗಾರರ ಬಳಿ ಬೆರಳಚ್ಚಿನ ಸಾಧನ ಇತ್ತು. ಸಾಕ್ಷಿ ಮುಂದುವರಿದು ಅವರಲ್ಲಿ ಬೆರಳಚ್ಚಿನ ಸಾಧನ ಇರಲಿಲ್ಲ ಆದರೆ ಸಣ್ಣದೊಂದು ಸಾಧನ ಅವರ ಬಳಿಯಲ್ಲಿ ಇತ್ತು ಆದರೆ ಅವರು ಅದನ್ನು ಬಳಸಿರುವುದಿಲ್ಲ. ಆ ಕೈಬರಹದ ಬರವಣಿಗೆಯನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ಹಸಿರು ಹಾಳೆಗಳಲ್ಲಿ ಬರೆದಿದ್ದರು. ನಾನು ಹೋಗುವಾಗ ಬರೆದಿದ್ದಂತಹ ಕೈ ಬರವಣಿಗೆಯ ದಾಖಲೆಯನ್ನು ನೊಂದಣಿ ಮಾಡಬೇಕೆಂದು ಮಾಸ್ತಿ ಗೌಡರು ಹೇಳಿದ್ದಾರೆಯೇ ಎಂಬ ಬಗ್ಗೆ ನನಗೆ ಈಗ ನೆನಪಿಲ್ಲ. ಸಾಕ್ಷಿ ಪುನಃ ಮುಂದುವರಿದು ಅವರು ಮಾಡಬೇಕೆಂದು ಹೇಳಿದ ವಿಚಾರ ನನಗೆ ನೆನಪಿದೆ ಆದರೆ ಅದನ್ನುನೊಂದಣಿ ಮಾಡಿದ್ದಾರೋ ಇಲ್ಲವೋ ಎಂಬ ವಿಚಾರ ನನಗೆ ಈಗ ನೆನಪಿಲ್ಲ. ನಾವು ನೊಂದಣಾಧಿಕಾರಿಯವರ ಕಚೇರಿ ಬಳಿ ಇದ್ದಿದ್ದರಿಂದ ಆ ದಿನ ನೊಂದಣಾಧಿಕಾರಿಯವರ ಬಳಿ ಮಾತನಾಡಿದ್ದಾರೋ ಇಲ್ಲವೋ ನನಗೆ ನೆನಪಿಲ್ಲ. ಪ್ರಥಮ ಬಾರಿ ಕೈ

ಬರವಣಿಗೆಯಲ್ಲಿ ಮೇಲೆ ಹೇಳಿದಂತ ದಸ್ತಾವೇಜಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಆ ದಿನ ನನಗೆ ಓದಿ ಹೇಳಿರುತ್ತಾರೆ ಆದರೆ ನನಗೆ ಈಗ ನೆನಪಾಗುತ್ತಿಲ್ಲ. ಆ ಪ್ರಥಮ ಕೈಬರವಣಿಗೆಯಲ್ಲಿ ಬರೆದ ದಸ್ತಾವೇಜಿನಲ್ಲಿ ಯಾರಿಗೆ ಏನು ಆಸ್ತಿ ಕೊಟ್ಟಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಆ ಪ್ರಥಮ ಕೈಬರವಣಿಗೆಯಲ್ಲಿ ಬರೆದ ದಸ್ತಾವೇಜಿನಲ್ಲಿ ಮಾಸ್ತಿ ಗೌಡರ ಹೆಂಡತಿ ಗಂಗಮ್ಮ ಮತ್ತು ಮೂರು ಹೆಣ್ಣು ಮಕ್ಕಳಿಗೆ ಏನು ಆಸ್ತಿ ಬರೆದಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಆ ಸಮಯದಲ್ಲಿ ನನಗೆ ಅದನ್ನು ಓದಿ ಹೇಳಿರುತ್ತಾರೆ. ನನ್ನ ಪ್ರಕಾರ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗೆ ಭಾಗವನ್ನು ಕೊಟ್ಟಿರುತ್ತಾರೆ. ಆ ಕೈ ಬರವಣಿಗೆಯಲ್ಲಿ ಅವರ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗೆ ಭಾಗವನ್ನು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರಿದು ಅವರು ನನ್ನಲ್ಲಿ ಬಾಯ್ದೆರೆಯಾಗಿ ಹೆಣ್ಣು ಮಕ್ಕಳಿಗೆ ಕೊಡಬೇಕಾದುದ್ದನ್ನು ಕೊಟ್ಟಿದ್ದೇವೆ ಉಳಿದ ಆಸ್ತಿಯನ್ನು ಗಂಡು ಮಕ್ಕಳಿಗೆ ಕೊಡುತ್ತೇನೆ ಎಂದು ಹೇಳಿರುತ್ತಾರೆ. ಆ ಕೈಬರವಣಿಗೆಯ ದಾಖಲೆಯಲ್ಲಿ ಗಂಡು ಮಕ್ಕಳಿಗೆ ಆಸ್ತಿಯನ್ನು ಕೊಟ್ಟಿರುತ್ತಾರೆ. ಅವರಿಗೆ ಎಷ್ಟು ಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ.

*(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).*

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**